# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **1341** |
| ಸದಸ್ಯರ ಹೆಸರು | : | ಶ್ರೀ ಎಸ್. ರವಿ<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 30-12-2022 |
| ಉತ್ತರಿಸುವ ಸಚಿವರು | : | ಕೃಷಿ ಸಚಿವರು |

<table>
<tr><th colspan="2">ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕಳೆದ 3 ವರ್ಷಗಳಲ್ಲಿ ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆಯಡಿ ರಾಜ್ಯದ ಎಷ್ಟು ರೈತರು ಬೆಳೆ ವಿಮೆಗಾಗಿ ನೋಂದಣಿ ಮಾಡಿಕೊಂಡಿರುತ್ತಾರೆ; ಈ ವರ್ಷಗಳಲ್ಲಿ ಎಷ್ಟು ರೈತರು ಬೆಳೆ ವಿಮೆ ಪರಿಹಾರಕ್ಕಾಗಿ ಅರ್ಜಿ ಸಲ್ಲಿಸಿರುತ್ತಾರೆ; ಈ ಪೈಕಿ ಎಷ್ಟು ರೈತರಿಗೆ ವಿಮೆ ಪರಿಹಾರ ಸಂದಾಯವಾಗಿದೆ; ಜಿಲ್ಲಾವಾರು ವಿವರ ನೀಡುವುದು;</td><td>ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆಯಡಿ ಕಳೆದ 3 ವರ್ಷಗಳಲ್ಲಿ ರಾಜ್ಯದಲ್ಲಿ ಬೆಳೆ ವಿಮೆಗಾಗಿ ನೋಂದಣಿ ಮಾಡಿಕೊಂಡಿರುವ, ಪರಿಹಾರಕ್ಕಾಗಿ ಅರ್ಜಿ ಸಲ್ಲಿಸಿರುವ ಹಾಗೂ ಬೆಳೆವಿಮೆ ಪರಿಹಾರ ಸಂದಾಯವಾಗಿರುವ ರೈತರ ವಿವರ ಈ ಕೆಳಗಿನಂತಿದ್ದು, ಜಿಲ್ಲಾವಾರು ವಿವರಗಳನ್ನು ಅನುಬಂಧ-1 ರಿಂದ ಅನುಬಂಧ-3 ರವರೆಗೆ ಒದಗಿಸಿದೆ.
<table>
<tr><th>ಕ್ರ. ಸಂ.</th><th>ವರ್ಷ</th><th>ನೋಂದಣಿ ಮಾಡಿರುವ ರೈತರ ಸಂಖ್ಯೆ</th><th>ಬೆಳೆವಿಮೆ ಪರಿಹಾರ ಕ್ಕಾಗಿ ಅರ್ಹರಿರುವ ರೈತರ ಸಂಖ್ಯೆ</th><th>ಬೆಳೆವಿಮೆ ಪರಿಹಾರ ಸಂದಾಯ ವಾಗಿರುವ ರೈತರ ಸಂಖ್ಯೆ</th></tr>
<tr><td>1</td><td>2019-20</td><td>2101240</td><td>768968</td><td>761440</td></tr>
<tr><td>2</td><td>2020-21</td><td>1516014</td><td>507257</td><td>502738</td></tr>
<tr><td>3</td><td>2021-22</td><td>1577103</td><td>813882</td><td>802117</td></tr>
<tr><td colspan="2">ಒಟ್ಟು</td><td>5194357</td><td>2090107</td><td>2066295</td></tr>
</table></td></tr>
<tr><td>ಆ)</td><td>ರಾಜ್ಯದಲ್ಲಿ ಕಳೆದ 3 ವರ್ಷಗಳಲ್ಲಿ ಈ ಯೋಜನೆಯಡಿ ಬೆಳೆ ವಿಮೆಗಾಗಿ ಸರ್ಕಾರ/ರೈತರು ವಿಮಾ ಸಂಸ್ಥೆಗಳಿಗೆ ಪಾವತಿಸಿರುವ ಮೊತ್ತವೆಷ್ಟು; ಸಂದರ್ಭಾನುಸಾರ ರೈತರಿಗೆ ಮಂಜೂರಾಗಿರುವ ಬೆಳೆ ವಿಮೆ ಪರಿಹಾರದ ಮೊತ್ತವೆಷ್ಟು; (ಜಿಲ್ಲಾವಾರು ವಿವರ ನೀಡುವುದು)</td><td>ರಾಜ್ಯದಲ್ಲಿ ಕಳೆದ 3 ವರ್ಷಗಳಲ್ಲಿ ಪ್ರಧಾನ ಮಂತ್ರಿ ಫಸಲ್ ಭಿಮಾ ಯೋಜನೆಯಡಿ ಬೆಳೆ ವಿಮೆಗಾಗಿ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಹಾಗೂ ರೈತರು ವಿಮಾ ಸಂಸ್ಥೆಗಳಿಗೆ ಪಾವತಿಸಿರುವ ಪ್ರೀಮಿಯಂ ಮೊತ್ತ ಹಾಗೂ ರೈತರಿಗೆ ಮಂಜೂರಾಗಿರುವ ಬೆಳೆ ವಿಮೆ ಪರಿಹಾರ ಮೊತ್ತದ ವಿವರ ಕೆಳಗಿನಂತಿರುತ್ತದೆ.<br>(ರೂ. ಲಕ್ಷಗಳಲ್ಲಿ)
<table>
<tr><th rowspan="2">ಕ್ರ. ಸಂ.</th><th rowspan="2">ವರ್ಷ</th><th colspan="3">ಬೆಳೆ ವಿಮೆಗಾಗಿ ಸರ್ಕಾರ / ರೈತರು ವಿಮಾ ಸಂಸ್ಥೆಗಳಿಗೆ ಪಾವತಿಸಿರುವ ಮೊತ್ತ</th><th rowspan="2">ರೈತರಿಗೆ ಮಂಜೂರಾಗಿರುವ ಬೆಳೆ ವಿಮೆ ಪರಿಹಾರದ ಮೊತ್ತ</th></tr>
<tr><th>ರೈತರ ವಂತಿಕೆ</th><th>ರಾಜ್ಯದ ಪಾಲು</th><th>ಕೇಂದ್ರದ ಪಾಲು</th></tr>
<tr><td>1.</td><td>2019-20</td><td>17350.41</td><td>81585.48</td><td>81585.48</td><td>86902.03</td></tr>
<tr><td>2.</td><td>2020-21</td><td>14331.28</td><td>66473.39</td><td>70320.02</td><td>62467.61</td></tr>
<tr><td>3.</td><td>2021-22</td><td>14551.17</td><td>65352.16</td><td>68462.05</td><td>83084.38</td></tr>
<tr><td colspan="2">ಒಟ್ಟು</td><td>46232.86</td><td>213411.00</td><td>220367.60</td><td>232454.02</td></tr>
</table>
ಜಿಲ್ಲಾವಾರು ಬೆಳೆ ವಿಮೆ ಪರಿಹಾರ ಸಂದಾಯವಾಗಿರುವ ವಿವರಗಳನ್ನು ಅನುಬಂಧ-1 ರಿಂದ ಅನುಬಂಧ-3 ರವರೆಗೆ ಒದಗಿಸಲಾಗಿದೆ.</td></tr>
</table>

| | | |
|---|---|---|
| ಇ) | ಈ ಯೋಜನೆಯಡಿ ನೋಂದಣಿಯಾಗಿರುವ ರೈತರಿಗೆ ವಿಮಾ ಸಂಸ್ಥೆಗಳು ಹಲವಾರು ತಾಂತ್ರಿಕ ನೆಪಗಳನ್ನೊಡ್ಡಿ, ವಿಮಾ ಪರಿಹಾರ ನೀಡದೆ ವಿಳಂಬ ಮಾಡುತ್ತಿರುವುದರಿಂದ ರೈತರಿಗೆ ತೊಂದರೆಗಳಾಗುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಸಮಸ್ಯೆಯನ್ನು ಪರಿಹರಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು? (ವಿವರ ನಿಡುವುದು) | 2019-20ನೇ ಸಾಲಿನಿಂದ ಸಂರಕ್ಷಣೆ ತಂತ್ರಾಂಶದ ಮುಖಾಂತರ ಅರ್ಹ ರೈತ ಫಲಾನುಭವಿಗಳ ಖಾತೆಗೆ ನೇರ ನಗದು ವರ್ಗಾವಣೆ (Direct Beneficiary Transfer) ಮಾಡುವ ಪ್ರಕ್ರಿಯೆಯನ್ನು ಕೈಗೊಳ್ಳಲಾಗಿದ್ದು, ಬೆಳೆ ವಿಮಾ ಪರಿಹಾರ ಮೊತ್ತವನ್ನು ವಿಮಾ ಸಂಸ್ಥೆಯವರಿಂದ ಇತ್ಯರ್ಥ ಪಡಿಸಲಾಗಿರುತ್ತದೆ. ಸದರಿ ಪ್ರಕ್ರಿಯೆಯಲ್ಲಿ ರೈತರ ಬ್ಯಾಂಕ್ ಖಾತೆಗೆ ಆಧಾರ್ ಜೋಡಣೆಯಾಗದ/NPCI seeding failed ಕಾರಣದಿಂದ Payments bounce back ಆಗಿರುತ್ತದೆ.<br><br>ಈ ಕುರಿತು ವಿಮಾ ಸಂಸ್ಥೆಯ ಪ್ರತಿನಿಧಿಗಳಿಗೆ, ಎಲ್ಲಾ ಬ್ಯಾಂಕ್ ಶಾಖೆಗಳಿಗೆ ಹಾಗೂ ಇಲಾಖೆಯ ಅಧಿಕಾರಿಗಳಿಗೆ ತರಬೇತಿ ನೀಡಲಾಗಿರುತ್ತದೆ ಹಾಗೂ ಸಂವಹನ ಚಟುವಟಿಕೆಗಳಾದ "Radio jingle", ದೂರದರ್ಶನ ಚಂದನವಾಹಿನಿಯಲ್ಲಿ Scrolling message content, ರೈತರ ಮೊಬೈಲ್‌ಗಳಿಗೆ Bulk SMS, ಕರಪತ್ರ ಹಾಗೂ ಭಿತ್ತಿಪತ್ರಗಳ ಮೂಲಕ ರೈತರಿಗೆ ವ್ಯಾಪಕವಾಗಿ ಪ್ರಚಾರ ಕೈಗೊಳ್ಳಲಾಗಿದೆ.<br><br>ಅಲ್ಲದೆ, ಪ್ರತಿ ಬುಧವಾರದಂದು ಜಿಲ್ಲೆಯ ಜಂಟಿ ಕೃಷಿ ನಿರ್ದೇಶಕರ ಕಛೇರಿಯಲ್ಲಿ ಹಾಗೂ ಶುಕ್ರವಾರದಂದು ಇಲಾಖೆಯ ಕೇಂದ್ರ ಕಛೇರಿಯಲ್ಲಿ ವಿಮಾ ಸಂಸ್ಥೆಯ ಪ್ರತಿನಿಧಿಗಳು ಹಾಗೂ ಬ್ಯಾಂಕ್ ಅಧಿಕಾರಿಗಳೊಂದಿಗೆ ಸಭೆಯನ್ನು ಆಯೋಜಿಸಿ Payments bounce back ಆಗಿರುವ ಪ್ರಸ್ತಾವನೆಗಳ ಇತ್ಯರ್ಥ ಕುರಿತು ಕ್ರಮ ಕೈಗೊಳ್ಳಲಾಗುತಿ . ಇಂತಹ ತಾಂತ್ರಿಕ ಸಮಸ್ಯೆಗಳು ಬಗೆಹರಿದಂತೆ, ಬೆಳೆ ವಿಮೆ ಪರಿಹಾರ ಮೊತ್ತವನ್ನು ಅನುಷ್ಠಾನ ವಿಮಾ ಸಂಸ್ಥೆಯವರು ಇತ್ಯರ್ಥಪಡಿಸುತ್ತಿದ್ದಾರೆ. |

ಸಂಖ್ಯೆ: ಕೃಇ 112 ಕೃಉಇ 2022

(ಬಿ.ಸಿ. ಪಾಟೀಲ್)
ಕೃಷಿ ಸಚಿವರು